ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 123/2018 , C/w 102/2019, C/w 159/2022**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಮಲ್ಲೇಶ್ | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಮಾರೇಗೌಡ | 23 | 17 |
| ವಯಸ್ಸು | 52 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **27.04.2026.** | |
| ಉದ್ಯೋಗ | Dy.S.P., ಹೊಸಕೋಟೆ ವಿಭಾಗ | | |
| ವಾಸ ಸ್ಥಳ | ಹೊಸಕೋಟೆ | | |

ಆದೇಶ ದಿನಾಂಕ 24.04.2026 ರಂತೆ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ದಿನಾಂಕ 25.08.2016 ರಿಂದ 17.09.2019 ರವರೆಗೆ Electronic City ಪೊಲೀಸ್ ಠಾಣೆಯಲ್ಲಿ ಪಿ.ಐ. ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 10.01.2017 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ. 22 ರವರಿಂದ ಪಡೆದುಕೊಂಡು ತನಿಖೆ ಮುಂದುವರಿಸಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಚಾಸಾ. 2 ಮತ್ತು 3 ರವರ ಹೇಳಿಕೆ ದಾಖಲು ಮಾಡಿದ್ದೇನೆ. ಅದೇ ದಿನ ಆರೋಪಿತರ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಕ ಮಾಡಿರುತ್ತೇನೆ. ದಿನಾಂಕ 11.01.2017 ರಂದು ಚಾಸಾ. 6 ರವರ ಹೇಳಿಕೆ ದಾಖಲು ಮಾಡಿದ್ದೇನೆ.

2. ದಿನಾಂಕ 15.01.2017 ರಂದು ಸಿಬ್ಬಂದಿಗಳಾದ ಚಾಸಾ. 18, 20 ಮತ್ತು 21 ರವರೊಂದಿಗೆ ಆರೋಪಿ ನಂ. 1 ರಿಂದ 3 ರವರನ್ನು ಸಂಜೆ 6.00 ಕ್ಕೆ ವಶಕ್ಕೆ ಪಡೊಕೊಂಡು ಠಾಣೆಗೆ ವಾಪಸ್ಸು ಬಂದು ದಸ್ತಗಿರಿ ಕ್ರಮ ಅನುಸರಿಸಿ ಸ್ವ-ಇಚ್ಛಾ ಹೇಳಿಕೆಗಳನ್ನು ದಾಖಲು ಮಾಡಿದ್ದೇನೆ. ಆರೋಪಿ ನಂ. 1 ರಿಂದ 3 ರವರು ತಮ್ಮ ಸ್ವ-ಇಚ್ಛಾ ಹೇಳಿಕೆಗಳಲ್ಲಿ ನನ್ನ ಜೊತೆಗೆ ಬಂದರೆ ಲಾರಿಯನ್ನು ಅನ್ಲೋಡ್ ಮಾಡಿ ನಿಲ್ಲಿಸಿರುವ ಜಾಗ ತೋರಿಸುತ್ತೇನೆ ಎಂದು ಹೇಳಿದ್ದು ಹಾಗೂ ಕೃತ್ಯಕ್ಕೆ ಬಳಸಿದ ಮೊಬೈಲ್ ಫೋನ್ ಗಳನ್ನು ಹೇಳಿದ್ದು ಆದ್ದರಿಂದ ಆರೋಪಿತರ ಹೇಳಿಕೆಗಳ ಸದರಿ ಭಾಗಗಳನ್ನು ನಿಶಾನೆ.ಪಿ. 25 ರಿಂದ 27 ಎಂದು,

ಸಾಕ್ಷಿಯ ಸಹಿಗಳನ್ನು ನಿಶಾನೆ.ಪಿ. 25 (ಎ) ರಿಂದ 27 (ಸಿ) ಎಂದು, ಆರೋಪಿತರ ಸಹಿಗಳನ್ನು ನಿಶಾನೆಪಿ. 25 (ಡಿ) ರಿಂದ 27 (ಎಫ್) ಎಂದು ಗುರುತಿಸಲಾಯಿತು.

3. ಆರೋಪಿ ನಂ. 1 ರವರ ಮೊಬೈಲ್ ಅನ್ನು ವಶಕ್ಕೆ ಪಡೆಯಲು ಠಾಣೆಯಲ್ಲಿ ಪಂಚಾಯ್ತಿದಾರರಾದ ಚಾಸಾ. 7 ಮತ್ತು 8 ರವರನ್ನು ಬರಮಾಡಿಕೊಂಡು ರಾತ್ರಿ 8.15 ರಿಂದ 8.45 ಗಂಟೆಯವರೆಗೆ ನಿಶಾನೆ.ಪಿ. 6 ರಂತೆ ಮಹಜರ್ ಮಾಡಿರುತ್ತೇನೆ. ನಿಶಾನೆ.ಪಿ. 6 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 6 (ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಆರೋಪಿ ನಂ. 1 ರವರು ಹಾಜರು ಪಡಿಸಿದ Sony Touch Screen ಅನ್ನು ಪಂಚರ ಸಮಕ್ಷಮ ಜಪ್ತಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ್ದು Sony Touch Screen ಮೊಬೈಲ್ ಅನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು. ಮಾ. 6 ಎಂದು ಗುರುತಿಸಲಾಯಿತು.

4. ಅದೇ ದಿನ ಆರೋಪಿ ನಂ. 2 ರವರ ಮೊಬೈಲ್‌ಗಳನ್ನು ವಶಕ್ಕೆ ಪಡೆಯಲು ಠಾಣೆಯಲ್ಲಿ ಪಂಚಾಯ್ತಿದಾರರಾದ ಚಾಸಾ. 7 ಮತ್ತು 8 ರವರನ್ನು ಬರಮಾಡಿಕೊಂಡು ರಾತ್ರಿ 8.50 ರಿಂದ 9.20 ಗಂಟೆಯವರೆಗೆ ನಿಶಾನೆ.ಪಿ. 7 ರಂತೆ ಮಹಜರ್ ಮಾಡಿರುತ್ತೇನೆ. ನಿಶಾನೆ.ಪಿ. 7 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 7 (ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಆರೋಪಿ ನಂ. 2 ರವರು ಹಾಜರು ಪಡಿಸಿದ White Colour Samsung Touch Screen and Samsung Mobile ಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ್ದು White Colour Samsung Touch Screen and Samsung Mobile ಗಳನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು. ಮಾ. 7 ಮತ್ತು 8 ಎಂದು ಗುರುತಿಸಲಾಯಿತು.

5. ಅದೇ ದಿನ ಆರೋಪಿ ನಂ. 3 ರವರ ಮೊಬೈಲ್ ಅನ್ನು ವಶಕ್ಕೆ ಪಡೆಯಲು ಠಾಣೆಯಲ್ಲಿ ಪಂಚಾಯ್ತಿದಾರರಾದ ಚಾಸಾ. 7 ಮತ್ತು 8 ರವರನ್ನು ಬರಮಾಡಿಕೊಂಡು ರಾತ್ರಿ 9.30 ರಿಂದ 10.00 ಗಂಟೆಯವರೆಗೆ ನಿಶಾನೆ.ಪಿ. 8 ರಂತೆ ಮಹಜರ್ ಮಾಡಿರುತ್ತೇನೆ. ನಿಶಾನೆ.ಪಿ. 8 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 8 (ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಆರೋಪಿ ನಂ. 3 ರವರು ಹಾಜರು ಪಡಿಸಿದ White Colour Lava Mobile ಅನ್ನು ಪಂಚರ ಸಮಕ್ಷಮ ಜಪ್ತಿ

ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ್ದು White Colour Lava Mobile ಅನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು. ಮಾ. 9 ಎಂದು ಗುರುತಿಸಲಾಯಿತು. ಜಪ್ತಿ ಮಾಡಿದ ಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 5/2017 ರಿಂದ 7/2017 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ತೋರಿಸಲಾಗಿದೆ. ಚಾಸಾ. 7 ಮತ್ತು 8 ರವರು ನನ್ನ ಸಮಕ್ಷಮ ನಿಶಾನೆ.ಪಿ. 9 ಮತ್ತು 10 ರಂತೆ ಹೇಳಿಕೆ ನೀಡಿರುತ್ತಾರೆ. ಸಿಬ್ಬಂದಿಗಳಾದ ಚಾಸಾ. 18 ರಿಂದ 21 ರವರ ಹೇಳಿಕೆ ದಾಖಲು ಮಾಡಿದ್ದೇನೆ.

6. ದಿನಾಂಕ 16.01.2018 ರಂದು ಆರೋಪಿ ನಂ. 1 ತಮ್ಮ ಸ್ವ-ಇಚ್ಛಾ ಹೇಳಿಕೆ ಮೇರೆಗೆ ಜಿಗಣಿ ಹೋಬಳಿ, ಕಾಡುಜಕ್ಕನಹಳ್ಳಿ ಗ್ರಾಮ ಬಳಿ ಇರುವ ವಡೆರಮಂಚನಹಳ್ಳಿ ಗ್ರಾಮದ ಮುನಿರಾಜುರವರಿಗೆ ಸೇರಿದ ಜಮೀನಿನ ಬಳಿ ನಮ್ಮನ್ನು, ಪಂಚರಾದ ಚಾಸಾ. 9 ಮತ್ತು 10 ರವರುಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದು ಅಲ್ಲಿ ಸುಲಿಗೆ ಮಾಡಿದ್ದ ಲಾರಿ KA-16/B-7703 ಅನ್ನು ತೋರಿಸಿದ್ದು ಅಲ್ಲಿ ಪಂಚರ ಸಮಕ್ಷಮ ಬೆಳಗ್ಗೆ 8.20 ರಿಂದ 10.00 ರವರೆಗೆ ನಿಶಾನೆ.ಪಿ. 11 ರಂತೆ ಮಹಜರ್ ಮಾಡಿದ್ದೇನೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 11 (ಸಿ) ಎಂದು ಗುರುತಿಸಲಾಯಿತು. ಪಂಚರ ಸಮಕ್ಷಮ ಸ್ಥಳದಲ್ಲಿ ಇದ್ದ ಲಾರಿ KA-16/B-7703 ಮತ್ತು ಅನ್ಲೋಡ್ ಆದ ಮರಳು, ಚಿಕ್ಕ ಪ್ಲಾಸ್ಟಿಕ್ ಬಕೇಟ್ ಮತ್ತು ಪೈಂಟ್ ಗೆ ಬಳಸುವ ಬ್ರಶ್ ಅನ್ನು ಜಪ್ತಿ ಮಾಡಿರುತ್ತೇನೆ. ಜಪ್ತಿ ಮಾಡಿದ ಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 8/2017 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ತೋರಿಸಲಾಗಿದೆ. ಮಹಜರ್ ಕಾಲದಲ್ಲಿ ನಿಶಾನೆ. 4 ಮತ್ತು 5 ರಂತೆ ಫೋಟೋಗಳನ್ನು ತೆಗೆದಿರುತ್ತೇನೆ. ನ್ಯಾಯಾಲಯದ ಮುಂದೆ ತೋರಿಸಿದ ಚಿಕ್ಕ ಪ್ಲಾಸ್ಟಿಕ್ ಬಕೇಟ್ ಮತ್ತು ಪೈಂಟ್ ಗೆ ಬಳಸುವ ಬ್ರಶ್ ಅನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು.ಮಾ. 10 ಮತ್ತು 11 ಎಂದು ಗುರುತಿಸಲಾಯಿತು. ಚಾಸಾ. 9 ಮತ್ತು 10 ರವರ ಹೇಳಿಕೆ ದಾಖಲು ಮಾಡಿದ್ದೇನೆ. ಚಾಸಾ. 10 ರವರು ನನ್ನ ಸಮಕ್ಷಮ ನಿಶಾನೆ.ಪಿ. 13 ರಂತೆ ಹೇಳಿಕೆ ನೀಡಿರುತ್ತಾರೆ.

7. ದಿನಾಂಕ 16.01.2018 ರಂದು ಆರೋಪಿ ನಂ. 2 ತಮ್ಮ ಸ್ವ-ಇಚ್ಛಾ ಹೇಳಿಕೆ ಮೇರೆಗೆ ಹೊಮ್ಮದೇವನಹಳ್ಳಿ ಗ್ರಾಮದ ಬಿ ಕೃಷ್ಣಪ್ಪ ರವರ ಸೇರಿದ ಜಮೀನಿನ ಮೈದಾನದ ಬಳಿ ನಮ್ಮನ್ನು, ಪಂಚರಾದ ಚಾಸಾ. 11 ಮತ್ತು 12 ರವರುಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದು ಅಲ್ಲಿ ಕೃತ್ಯಕ್ಕೆ

ಬಳಸಿದ ಕಬ್ಬಿಣದ ಕತ್ತಿಯನ್ನು ಹಾಜರು ಪಡಿಸಿದ್ದು ಅಲ್ಲಿ ಪಂಚರ ಸಮಕ್ಷಮ ಮಧ್ಯಾಹ್ನ 12.30 ರಿಂದ 01.30 ರವರೆಗೆ ನಿಶಾನೆ.ಪಿ. 14 ರಂತೆ ಮಹಜರ್ ಮಾಡಿದ್ದೇನೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 14 (ಬಿ) ಎಂದು ಗುರುತಿಸಲಾಯಿತು. ಪಂಚರ ಸಮಕ್ಷಮ ಸ್ಥಳದಲ್ಲಿ ಬಿದ್ದಿದ್ ದಕಬ್ಬಿಣದ ಕತ್ತಿಯನ್ನು ಅನ್ನು ಜಪ್ತಿ ಮಾಡಿರುತ್ತೇನೆ. ಜಪ್ತಿ ಮಾಡಿದ ಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 9/2017 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ತೋರಿಸಲಾಗಿದೆ. ನ್ಯಾಯಾಲಯದ ಮುಂದೆ ತೋರಿಸಿದ ಕಬ್ಬಿಣದ ಕತ್ತಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು.ಮಾ. 12 ಎಂದು ಗುರುತಿಸಲಾಯಿತು.

8. ದಿನಾಂಕ 16.01.2018 ರಂದು ಆರೋಪಿ ನಂ. 3 ತಮ್ಮ ಸ್ವ-ಇಚ್ಛಾ ಹೇಳಿಕೆ ಮೇರೆಗೆ ಹೊಮ್ಮದೇವನಹಳ್ಳಿ ಗ್ರಾಮದ ಬಿ ಕೃಷ್ಣಪ್ಪ ರವರ ಸೇರಿದ ಜಮೀನಿನ ಮೈದಾನದ ಬಳಿ ನಮ್ಮನ್ನು, ಪಂಚರಾದ ಚಾಸಾ. 11 ಮತ್ತು 12 ರವರುಗಳನ್ನು ಕರೆದುಕೊಂಡು ಹೋಗಿ ಅಲ್ಲಿ ATM Card ಅನ್ನು ಮತ್ತು DL ಸುಟ್ಟಿದ್ದ ಬೂದಿಯನ್ನು ಹಾಜರು ಪಡಿಸಿದ್ದು ಅಲ್ಲಿ ಪಂಚರ ಸಮಕ್ಷಮ ಮಧ್ಯಾಹ್ನ 1.45 ರಿಂದ 02.40 ರವರೆಗೆ ನಿಶಾನೆ.ಪಿ. 15 ರಂತೆ ಮಹಜರ್ ಮಾಡಿದ್ದೇನೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 15 (ಬಿ) ಎಂದು ಗುರುತಿಸಲಾಯಿತು. ಪಂಚರ ಸಮಕ್ಷಮ ಸ್ಥಳದಲ್ಲಿ ATM Card ಅನ್ನು ಮತ್ತು DL ಸುಟ್ಟಿದ್ದ ಬೂದಿಯನ್ನು ಅನ್ನು ಜಪ್ತಿ ಮಾಡಿರುತ್ತೇನೆ. ಜಪ್ತಿ ಮಾಡಿದ ಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 10/2017 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ತೋರಿಸಲಾಗಿದೆ. ನ್ಯಾಯಾಲಯದ ಮುಂದೆ ತೋರಿಸಿದ ATM Card ಅನ್ನು ಮತ್ತು DL ಸುಟ್ಟಿದ್ದ ಬೂದಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮು.ಮಾ. 13 ಎಂದು ಗುರುತಿಸಲಾಯಿತು. ಚಾಸಾ. 11 ಮತ್ತು 12 ರವರ ಹೇಳಿಕೆ ದಾಖಲು ಮಾಡಿದ್ದೇನೆ.

9. ದಿನಾಂಕ 16.01.2018 ರಂದು ಸಿಬ್ಬಂದಿಗಳಾದ ಚಾಸಾ. 18 ರಿಂದ 21 ರವರು ಉಳಿದ ಆರೋಪಿತರಾದ 4 ರಿಂದ 6 ರವರನ್ನು ಪತ್ತೆ ಹಚ್ಚಿ ಹಾಜರು ಪಡಿಸಿದ್ದು ನಾನು ಅವರ ದಸ್ತಗಿರಿ ಕ್ರಮ ಅನುಸರಿಸಿ ಸ್ವ-ಇಚ್ಛಾ ಹೇಳಿಕೆಗಳನ್ನು ದಾಖಲು ಮಾಡಿದ್ದೇನೆ. ಆರೋಪಿ ನಂ. 4 ರಿಂದ 6 ರವರು ತಮ್ಮ ಸ್ವ-ಇಚ್ಛಾ ಹೇಳಿಕೆಗಳಲ್ಲಿ ನನ್ನ ಜೊತೆಗೆ ಬಂದರೆ ಹೊಮ್ನಿ ವ್ಯಾನ್ ನಿಲ್ಲಿಸಿದ ಸ್ಥಳ ಮತ್ತು ಕೃತ್ಯಕ್ಕೆ ಬಳಸಿದ ಮೊಬೈಲ್ ಫೋನ್ ಗಳನ್ನು ತೆಗೆದು ಹಾಜರು ಪಡಿಸುವುದಾಗಿ ತಿಳಿಸಿದ್ದು ಆದ್ದರಿಂದ ಆರೋಪಿತರ

ಹೇಳಿಕೆಗಳ ಸದರಿ ಭಾಗಗಳನ್ನು ನಿಶಾನೆ.ಪಿ. 28 ರಿಂದ 30 ಎಂದು, ಸಾಕ್ಷಿಯ ಸಹಿಗಳನ್ನು ನಿಶಾನೆ.ಪಿ. 28 (ಎ) ರಿಂದ 30 (ಸಿ) ಎಂದು, ಆರೋಪಿತರ ಸಹಿಗಳನ್ನು ನಿಶಾನೆಪಿ. 28 (ಡಿ) ರಿಂದ 30 (ಎಫ್) ಎಂದು ಗುರುತಿಸಲಾಯಿತು. ಆರೋಪಿತರನ್ನು ಹಾಜರು ಪಡಿಸಿದ ಬಗ್ಗೆ ಚಾಸಾ. 21 ರವರು ವರದಿ ನೀಡಿದ್ದು ಅದನ್ನು ನಿಶಾನೆ.ಪಿ. 31 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 31 (ಎ) ಎಂದು ಗುರುತಿಸಲಾಯಿತು.

10. ದಿನಾಂಕ 16.01.2018 ರಂದು ಆರೋಪಿ ನಂ. 4 ರವರ ಮೊಬೈಲ್ ಅನ್ನು ವಶಕ್ಕೆ ಪಡೆಯಲು ಠಾಣೆಯಲ್ಲಿ ಪಂಚಾಯ್ತಿದಾರರಾದ ಚಾಸಾ. 13 ಮತ್ತು 14 ರವರನ್ನು ಬರಮಾಡಿಕೊಂಡು ರಾತ್ರಿ 8.30 ರಿಂದ 9.00 ಗಂಟೆಯವರೆಗೆ ನಿಶಾನೆ.ಪಿ. 20 ರಂತೆ ಮಹಜರ್ ಮಾಡಿರುತ್ತೇನೆ. ನಿಶಾನೆ.ಪಿ. 20 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 20 (ಬಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಆರೋಪಿ ನಂ. 4 ರವರು ಹಾಜರು ಪಡಿಸಿದ Blue Colour Samsung Mobile ಅನ್ನು ಪಂಚರ ಸಮಕ್ಷಮ ಜಪ್ತಿ ಮಾಡಿರುತ್ತೇನೆ. ಮು. ಮಾ. 4 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

11. ದಿನಾಂಕ 16.01.2018 ರಂದು ಆರೋಪಿ ನಂ. 4 ರವರ ಮೊಬೈಲ್ ಅನ್ನು ವಶಕ್ಕೆ ಪಡೆಯಲು ಠಾಣೆಯಲ್ಲಿ ಪಂಚಾಯ್ತಿದಾರರಾದ ಚಾಸಾ. 13 ಮತ್ತು 14 ರವರನ್ನು ಬರಮಾಡಿಕೊಂಡು ರಾತ್ರಿ 8.30 ರಿಂದ 9.00 ಗಂಟೆಯವರೆಗೆ ನಿಶಾನೆ.ಪಿ. 20 ರಂತೆ ಮಹಜರ್ ಮಾಡಿರುತ್ತೇನೆ. ನಿಶಾನೆ.ಪಿ. 20 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 20 (ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಆರೋಪಿ ನಂ. 4 ರವರು ಹಾಜರು ಪಡಿಸಿದ Blue Colour Samsung Mobile ಅನ್ನು ಪಂಚರ ಸಮಕ್ಷಮ ಜಪ್ತಿ ಮಾಡಿರುತ್ತೇನೆ. ಮು. ಮಾ. 4 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

12. ದಿನಾಂಕ 16.01.2018 ರಂದು ಆರೋಪಿ ನಂ. 5 ರವರ ಮೊಬೈಲ್ ಅನ್ನು ವಶಕ್ಕೆ ಪಡೆಯಲು ಠಾಣೆಯಲ್ಲಿ ಪಂಚಾಯ್ತಿದಾರರಾದ ಚಾಸಾ. 13 ಮತ್ತು 14 ರವರನ್ನು ಬರಮಾಡಿಕೊಂಡು ರಾತ್ರಿ 9.05 ರಿಂದ 9.40 ಗಂಟೆಯವರೆಗೆ ನಿಶಾನೆ.ಪಿ. 21 ರಂತೆ ಮಹಜರ್ ಮಾಡಿರುತ್ತೇನೆ. ನಿಶಾನೆ.ಪಿ. 20 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 21 (ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಆರೋಪಿ ನಂ. 5 ರವರು ಹಾಜರು ಪಡಿಸಿದ ಪಿರ್ಯಾದಿಗೆ ಸೇರಿದ Black Colour

Samsumg Phone ಹಾಗೂ ತನ್ನ Black and Red Colour Karbon Mobile ಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿರುತ್ತೇನೆ. ಮು.ಮಾ. 1 ಮತ್ತು 5 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

13. ದಿನಾಂಕ 16.01.2018 ರಂದು ಆರೋಪಿ ನಂ. 6 ರವರ ಮೊಬೈಲ್ ಅನ್ನು ವಶಕ್ಕೆ ಪಡೆಯಲು ಠಾಣೆಯಲ್ಲಿ ಪಂಚಾಯ್ತಿದಾರರಾದ ಚಾಸಾ. 13 ಮತ್ತು 14 ರವರನ್ನು ಬರಮಾಡಿಕೊಂಡು ರಾತ್ರಿ 9.45 ರಿಂದ 10.15 ಗಂಟೆಯವರೆಗೆ ನಿಶಾನೆ.ಪಿ. 22 ರಂತೆ ಮಹಜರ್ ಮಾಡಿರುತ್ತೇನೆ. ನಿಶಾನೆ.ಪಿ. 20 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 22 (ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಆರೋಪಿ ನಂ. 6 ರವರು ಹಾಜರು ಪಡಿಸಿದ Black Colour unnamed small Phone ಅನ್ನು ಪಂಚರ ಸಮಕ್ಷಮ ಜಪ್ತಿ ಮಾಡಿರುತ್ತೇನೆ. ಮು.ಮಾ. 3 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಜಪ್ತಿ ಮಾಡಿದ ಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 11/2017 ರಿಂದ 13/2017 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ತೋರಿಸಲಾಗಿದೆ. ಅದೇ ದಿನ ಚಾಸಾ. 13 ಮತ್ತು 14 ರವರು ನನ್ನ ಸಮುಕ್ಷಮ ನಿಶಾನೆ.ಪಿ. 23 ಮತ್ತು 24 ರಂತೆ ಹೇಳಿಕೆ ದಾಖಲು ಮಾಡಿದ್ದೇನೆ. ಚಾಸಾ. 1 ರವರು ಮಾಲು ಮತ್ತು ಆರೋಪಿತರನ್ನು ಗುರುತಿಸಿದ ಬಗ್ಗೆ ಹೇಳಿಕೆ ದಾಖಲು ಮಾಡಿದ್ದೇನೆ.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.